ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).–

ಅ) ಆಗಿದೆ.

ಆ) ರೂ. ೨.೨೦ ಲಕ್ಷಗಳು

ಇ) ಜಲಮಂಡಲವನ್ನು ಸ್ಥಾಪಿಸಲಾಗಿದೆ. ಟೆಂಡರಂ ಕರೆಯಲಾಗಿತ್ತು ಟೆಂಡರು ಸ್ವೀಕೃತವಾದ ನಂತರ ಕೆಲಸವನ್ನು ಕೈಗೊಳ್ಳಲಾಗುವುದು.

ಸರ್ಕಾರವು ಬೆಂಗಳೂರು ಮಹಾನಗರಪಾಲಿಕೆಗೆ ಷೋಕಾಸ್ ನೋಟೀಸ್ ಕೊಟ್ಟಿರುವ ಬಗ್ಗೆ

೧೧೭೦. ಶ್ರೀ ಸಿ. ಕಣ್ಣನ್ (ಶಾಂತಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಆಹಾರ ಮಂತ್ರು, ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪಾಲ್ಟನೇ ದರ್ಜೆ ನೌಕರರ ನೇಮಕಾತಿ ಬಗ್ಗೆ ಸರ್ಕಾರವು ಬೆಂಗಳೂರು ಮಹಾನಗರಪಾಲಿಕೆಗೆ ಸೂಚನಾಪತ್ರ ಕಳುಹಿಸಿರುವುದು ನಿಜವೇ ?

ಆ) ಈ ನೇಮಕಾತಿಯನ್ನು ಕ್ರಮಬದ್ಧ ಮಾಡಲು ಬೆಂಗಳೂರು ಮಹಾನಗರ ಪಾಲಿಕೆಯು ನಿರ್ಣಯ ಮಾಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಬಿಜಾಪುರ ನಗರದಲ್ಲಿ ಅಂಗಡಿಗಳನ್ನು ಒಡೆದು ಹಾಕಿರುವುದು ಕುರಿತು

೧೧೮೭. ಶ್ರೀ ಎಂ. ಎಲ್. ಉಸ್ತಾದ್.–ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು. ಆಹಾರ ಮಂತ್ರು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ನಗರದ ಎಂ. ಜಿ. ರಸ್ತೆ ಮತ್ತು ಇತರ ಭಾಗದಲ್ಲಿ ಅಂಗಡಿಗಳು ಕೆಡವಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸರ್ಕಾರವು ಇದರ ಬಗ್ಗೆ ಯಾವುದೇ ಆದೇಶ ಅಥವಾ ನಿರ್ದೇಶನ ನೀಡಿದೆಯೇ?

ಇ) ಇಲ್ಲದಿದ್ದಲ್ಲಿ ಅಂಗಡಿಗಳನ್ನು ಕೆಡವಿಸಲು ಆದೇಶಿಸಿದ ಸಂಬಂಧಪಟ್ಟ ಅಧಿಕಾರಿ ವ್ಯಾಪ್ತಿ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮಂತ್ರು ನಾಗರೀ ಸರಬರಾಜು ಮಂತ್ರಿಗಳು).—

ಅ) ಹೌದು

ಆ) ಇಲ್ಲ

ಇ) ನಗರಸಭೆ ಆಯುಕ್ತರು ಮತ್ತು ಜಿಲ್ಲಾ ಇಲಾಖೆ ಮುಖ್ಯಸ್ಥರು (ಲೋಕೋಪಯೋಗಿ, ಪೋಲೀಸ್) ಹಾಗೂ ಬಿಜಾಪುರ ಜಿಲ್ಲಾಧಿಕಾರಿಗಳು ಒಟ್ಟಿಗೆ ಖುಲ್ಲಾ ಮಾಡಲು ನಿರ್ಣಯ ತೆಗೆದುಕೊಂಡು ವಕ್ಕರಿಸಿ ಮಾಡಿರುವ ಅಂಗಡಿಗಳನ್ನು ಕೆಡವಿರುತ್ತಾರೆ.